



'ಪಾರ್ಟುಗಳು' ಎಂದಾಕ್ಷಣ ಯಾವುದೋ ಗ್ಯಾರೇಜಿನಲ್ಲಿ ಬಿದ್ದಿರುವ ಬಿಡಿ ಭಾಗಗಳ ಬಗ್ಗೆ ಹೇಳ್ತಿದಾಳೆ ಅಂದ್ಕೋತೀರಿ. ಉಹ್ಞೂಂ, ಅದಲ್ಲವಪ್ಪ. ನಾನು ಹೇಳುತ್ತಿರುವುದು ಗಾಡಿಯಲ್ಲ, ನಮ್ಮ ಬಾಡಿಯಲ್ಲಿರುವ ಪಾರ್ಟುಗಳ ಬಗ್ಗೆ. ದೇವರು ನಮ್ಮ ಈ ಪೂರ್ತಿ ದೇಹವನ್ನು ಒಂದೇ ಪೀಸಿನಲ್ಲಿ ಕರುಣಿಸಿದ್ದಾನೆ. ಬ್ರಹ್ಮ ಸೃಷ್ಟಿಸುವಾಗಲೇ ಪ್ರತಿಯೊಬ್ಬರನ್ನೂ ಏಕಶಿಲಾವಿಗ್ರಹವಾಗೇ ಕೆತ್ತುತ್ತಾನೆ. ಜೀವ ನೀಡುತ್ತಾನೆ. ಎಲ್ಲಿ ತಾಗಿದರೂ ನೋವಾಗುತ್ತದೆ. ಯಾವುದನ್ನೂ ಬಿಚ್ಚಿಡುವಂತಿಲ್ಲ. ಇಟ್ಟು ಮರೆಯುವಂತಿಲ್ಲ. ಮರೆತು ಕಳೆಯುವಂತಿಲ್ಲ. ಇದು ಜೀವಿಗಳಿಗೆ ಅವನು ಮಾಡಿರುವ ದೊಡ್ಡ ಉಪಕಾರ. ಅಕಸ್ಮಾತ್... ಬೂಟು, ಸಾಕ್ಸು, ಟೈ, ಪ್ಯಾಂಟು, ಸೀರೆಯ ತರ ರಾತ್ರಿ ತಲೆ, ಎದೆ, ಹೊಟ್ಟೆ, ಬೆನ್ನು, ಕೈ, ಕಾಲು ಎಲ್ಲ ಡಿಸ್‌ಮ್ಯಾಂಟಲ್ ಮಾಡಿಟ್ಟು ಬೆಳಿಗ್ಗೆ ಎಲ್ಲ ಪೀಸುಗಳನ್ನು ಸರಿಯಾಗಿ ಜೋಡಿಸಿಕೊಂಡು 'ನಾವು' ರೂಪ ತಾಳುವಂತಿದ್ದರೆ... ಮಶಿನ್ನಿನಂತೆ ಬಿಚ್ಚಿಟ್ಟದ್ದೆಲ್ಲ ಸರಿಯಾಗಿ ಜೋಡಿಸಿಕೊಂಡು ದಿನದಿನವೂ ಮೈದಳೆಯುವಂತಿದ್ದರೆ... ಕತೆ ಬೇರೆಯೇ ಆಗಿರುತ್ತಿತ್ತು. ಬಹುಶಃ ಕವಿಗಳು 'ನಿತ್ಯ ಹೊಸ ಜನ್ಮ...' ಎಂದು ಬರೆಯುತ್ತಿದ್ದರು. ಎಲ್ಲ ಪಾರ್ಟುಗಳ ತಂಟೆಗೆ ಹೋಗಲ್ಲಪ್ಪ ನಾನು. ಹೃದಯ, ಮೆದುಳು, ಕರುಳು... ಹಾಕಿಕೊಳ್ಳುವಾಗ ಹೆಚ್ಚು ಕಮ್ಮಿಯಾಗಿ ಅವಸರದಲ್ಲಿ ಕೆಳಗಿನದು ಮೇಲೆ,